# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿದ್ಯಾರಣ್ಯಪುರ ಉಪವಿಭಾಗ, ಬೆಂಗಳೂರು.

ದಿನಾಂಕ: 05-11-2022 ರಂದು ಬೆಳಿಗ್ಗೆ 11.00 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ13 ರಲ್ಲಿ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಕಮಿಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ ಕಿರಣ್ ಬಿ | ನೋಡೆಲ್ ಅಧಿಕಾರಿ ಹಾಗೂ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ, ಯಲಹಂಕ |
| 2 | ಕು॥ ಮೇಘನಾ ಎಂ | ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ 13, ದೊಡ್ಡಬೊಮ್ಮಸಂದ್ರ |
| 3 | ಶ್ರೀ ಮಲ್ಯಾದ್ರಿ | ತೋಟಗಾರಿಕಾ ಪರಿವೀಕ್ಷಕರು |
| 4 | ಶ್ರೀ ನಾಗಪ್ಪ ಎ | ಕಂದಾಯ ಪರಿವೀಕ್ಷಕರು |
| 5 | ಶ್ರೀ ನವೀನ್ ಎನ್ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ 13, ದೊಡ್ಡಬೊಮ್ಮಸಂದ್ರ |
| 6 | ಶ್ರೀಮತಿ ಸಾನಿಯಾ ಆರ್ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ 13, ದೊಡ್ಡಬೊಮ್ಮಸಚಿದ್ರ |
| 7 | ಶ್ರೀ ನಾಗರಾಜ್ ಎ.ಹೆಚ್ | ಎ.ಎಸ್.ಐ, ಪೋಲೀಸ್ ಠಾಣೆ |
| 8 | ಶ್ರೀ ವೇದಾಂತ್ ಆರ್ | ಬೀದಿ ದೀಪ ನಿರ್ವಹಣೆ |
| 9 | ಶ್ರೀ ಬಿ.ಎಸ್ ಗೋಪಾಲಕೃಷ್ಣ | ವಾರ್ಡ್ ಅಧ್ಯಕ್ಷರು |
| 10 | ಶ್ರೀ ಜೆ ಮಲ್ಯಾದ್ರಿ | ಬ್ಲಾಕ್ ಅಧ್ಯಕ್ಷರು |
| 11 | ಶ್ರೀಮತಿ ಸೌಭಾಗ್ಯ | ಸಾರ್ವಜನಿಕರು |
| 12 | ಶ್ರೀಮತಿ ಅರುಲ್ ಮೇರಿ | ಸಾರ್ವಜನಿಕರು |

ದಿನಾಂಕ: 05-11-2022 ರಂದು ಬೆಳಿಗ್ಗೆ 11.00 ಗಂಟೆಗೆ ದೊಡ್ಡಬೊಮ್ಮಸಂದ್ರ ವಾರ್ಡ್ ಸಂ:13ರ ಕಛೇರಿಯಲ್ಲಿ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ವಾರ್ಡ್ ವ್ಯಾಪ್ತಿಗೆ ಸಂಬಂಧಿಸಿದ ಇಲಾಖಾ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪ್ರತಿನಿಧಿಗಳೊಂದಿಗೆ ನಡೆಸಿದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮತೆಗೆದು ಕೊಳ್ಳಬೇಕಾಗಿರುವ ಅಧಿಕಾರಿ / ಇಲಾಖೆ |
|---|---|---|---|
| 1 | ಶ್ರೀ.ಶ್ರೀನಿವಾಸ್ ರವರು ರಾಮಚಂದ್ರಪುರ ಟೆಂಟ್ ಹಿಂಭಾಗದ ಕೊಳವೆ ಬಾವಿ ದುರಸ್ಥಿಯಾಗಿದ್ದು, ಇದನ್ನು ಕಾರ್ಯರೂಪಕ್ಕೆ ತರಲು ಕೋರಿರುತ್ತಾರೆ ಮತ್ತು ಬೈರಪ್ಪ ಗಾರ್ಡನ್ ಕೊಳವೆ ಬಾವಿ Panel board ಅಳವಡಿಸಲು ಕೋರಿರುತ್ತಾರೆ. | ಸದರಿ ಕೊಳವೆ ಬಾವಿಯ ಪ್ರದೇಶವನ್ನು ವಾರ್ಡಿನ ಅಭಿಯಂತರರು ಮತ್ತು ಬಿಡಬ್ಲ್ಯೂಎಸ್ಎಸ್ ಸಹಾಯಕ ಅಭಿಯಂತರರು ಪರಿಶೀಲಿಸಿ ಅತಿ ತುರ್ತಾಗಿ ಇದನ್ನು ಕಾರ್ಯರೂಪಕ್ಕೆ ತರಲು ಸೂಚಿಸಲಾಯಿತು | ವಾರ್ಡಿನ ಅಭಿಯಂತರರು ಮತ್ತು ಬಿಡಬ್ಲ್ಯೂಎಸ್ಎಸ್ ಸಹಾಯಕ ಅಭಿಯಂತರರು |

Scanned by CamScanner

| | | | |
|---|---|---|---|
| 2 | ರಾಮಚಂದ್ರಪುರದ ಶ್ರೀರಾಮ ಮಂದಿರದ ಹತ್ತಿರವಿರುವ ಅಲದ ಮರದ ಗೊಂಬೆಗಳನ್ನು ಕಟಾವು ಮಾಡಲು ಶ್ರೀ.ಶ್ರೀನಿವಾಸ್ ರವರು ಕೋರಿರುತ್ತಾರೆ. | ಸದರಿ ದೂರಿಗೆ ಸಂಬಂಧಿಸಿದಂತೆ ವಾರ್ಡಿನ ಅಭಿಯಂತರರು ಯಲಹಂಕ ವಿಭಾಗದ ಅರಣ್ಯ ಇಲಾಖೆಯ ಅಧಿಕಾರಿರವರೊಂದಿಗೆ (ಶ್ರೀ.ಚಂದ್ರಪ್ಪ) ಚರ್ಚಿಸಿ ಅತಿ ತುರ್ತಾಗಿ ಕ್ರಮ ಕೈಗೊಳ್ಳಲು ಸೂಚಿಸಲಾಯಿತು | ವಾರ್ಡಿನ ಅಭಿಯಂತರರು ಮತ್ತು ಅರಣ್ಯ ಇಲಾಖೆ ಸಿಬ್ಬಂದಿ |
| 3 | ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ bleaching powder ಅನ್ನು ಸರಬರಾಜು ಮಾಡಲು ಸಾರ್ವಜನಿಕರು ಕೋರಿರುತ್ತಾರೆ. | Bleaching powder ಅನ್ನು ಸರಬರಾಜು ಮಾಡಲು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರೊಂದಿಗೆ ಚರ್ಚಿಸಿ Bleaching powder ಅನ್ನು ಟೆಂಡರ್ ಪ್ರಕ್ರಿಯೆ ಮೂಲಕ ಪಡೆದುಕೊಳ್ಳಬೇಕಾಗಿರುತ್ತದೆ ಎಂದು ಚರ್ಚಿಸಲಾಯಿತು | ಘನ ತ್ಯಾಜ್ಯ ನಿರ್ವಹಣೆ ವಿಭಾಗ, ಯಲಹಂಕ ವಲಯ |
| 4 | ದೊಡ್ಡಬೊಮ್ಮಸಂದ್ರ ಕೆರೆಯ ಪಾದಚಾರಿ ಮಾರ್ಗದಲ್ಲಿ ಮರಳು/ಹೂಳನ್ನು ಹಾಕಿದ್ದು, ಇದನ್ನು ತೆರವುಗೊಳಿಸದಿರುವ ಬಗ್ಗೆ ಸಾರ್ವಜನಿಕರು ಅಸಮಧಾನ ವ್ಯಕ್ತ ಪಡಿಸಿರುತ್ತಾರೆ. | ಸದರಿ ದೂರಿಗೆ ಸಂಬಂಧಿಸಿದಂತೆ ಸಹಾಯಕ ಅಭಿಯಂತರರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರವರೊಂದಿಗೆ ಚರ್ಚಿಸಿ ಅತಿ ತುರ್ತಾಗಿ ಮರಳು/ಹೂಳನ್ನು ತೆರವುಗೊಳಿಸಲು ಸೂಚಿಸಲಾಗುವುದು. | ನೋಡಲ್ ಅಧಿಕಾರಿ, ಹಾಗೂ ವಾರ್ಡ್ ಅಭಿಯಂತರರು, ಬಿಬಿಎಂಪಿ, ವಾರ್ಡ್ ನಂ:13 |
| 5 | ಶ್ರೀ.ಕೆ.ಹೆಚ್.ಚಂದ್ರಶೇಖರ್ ರವರು ವಾರ್ಡಿನ ವ್ಯಾಪ್ತಿಯಲ್ಲಿ ಹಲವಾರು ಖಾಸಗಿ ಸಂಸ್ಥೆಗಳು O.F.C ಅನ್ನು ಅನಧಿಕೃತವಾಗಿ ಅಳವಡಿಸುತ್ತಿರುವ ಬಗ್ಗೆ ಸಮಿತಿಯಲ್ಲಿ ವ್ಯಕ್ತ ಪಡಿಸಿರುತ್ತಾರೆ ಹಾಗೂ ಇದರ ವಿವರವನ್ನು ನೀಡಲು ಕೋರಿರುತ್ತಾರೆ. | ವಾರ್ಡಿನ ವ್ಯಾಪ್ತಿಯಲ್ಲಿ ಹಲವಾರು ಖಾಸಗಿ ಸಂಸ್ಥೆಗಳು O.F.C ಅನ್ನು ಅನಧಿಕೃತವಾಗಿ ಅಳವಡಿಸುತ್ತಿರುವ ಬಗ್ಗೆ ಪರಿಶೀಲಿಸಲು ವಾರ್ಡಿನ ಅಭಿಯಂತರವರಿಗೆ ತಪಾಸಣೆ ಕೈಗೊಳ್ಳಲು ಸೂಚಿಸಲಾಯಿತು ಹಾಗೂ ಶ್ರೀ. ಕೆ.ಹೆಚ್.ಚಂದ್ರಶೇಖರ್ ರವರಿಗೆ ಸದರಿ ಮಾಹಿತಿಯನ್ನು ಕೇಂದ್ರ ಕಛೇರಿಯ O.F.C ವಿಭಾಗದಲ್ಲಿ ಪಡೆದುಕೊಳ್ಳಲು ಸೂಚಿಸಲಾಯಿತು. | ವಾರ್ಡ್ ಅಭಿಯಂತರರು. |
| 6 | ದೊಡ್ಡಬೊಮ್ಮಸಂದ್ರ ಮುಖ್ಯ ರಸ್ತೆಯಲ್ಲಿ ರಸ್ತೆ ಮೂಲ ಭೂತ ಸೌಕರ್ಯ ವಿಭಾಗದ ವತಿಯಿಂದ ಕೈಗೊಂಡಿರುವ ಚರಂಡಿ ಕಾಮಗಾರಿಯು ತೃಪ್ತಿಕರವಾಗಿ ನಿರ್ವಹಿಸಿರುವುದಿಲ್ಲ ಎಂದು ಶ್ರೀ.ಧಯಾಳ್ ರವರು ತಿಳಿಸಿರುತ್ತಾರೆ. | ರಸ್ತೆ ಮೂಲ ಭೂತ ಸೌಕರ್ಯ ವಿಭಾಗಕ್ಕೆ ಸಂಬಂಧಿಸಿದಂತೆ ದೊಡ್ಡಬೊಮ್ಮಸಂದ್ರ ಮುಖ್ಯ ರಸ್ತೆಯಲ್ಲಿ ಕೈಗೊಂಡಿರುವ ಕಾಮಗಾರಿಯ ಪ್ರದೇಶವನ್ನು ಪರಿಶೀಲಿಸಿ ಸಂಬಂಧಪಟ್ಟ ಅಭಿಯಂತರರಿಗೆ ಸದರಿ ಕಾಮಗಾರಿಯನ್ನು ತೃಪ್ತಿಕರವಾಗಿ ಪೂರ್ಣಗೊಳಿಸಲು ವಾರ್ಡಿನ ಅಭಿಯಂತರರಿಗೆ ಸೂಚಿಸಲಾಯಿತು | ವಾರ್ಡ್ ಅಭಿಯಂತರರು. |

ಸದಸ್ಯ ಕಾರ್ಯದರ್ಶಿ
ವಾರ್ಡ್ ನಂ:13
ದೊಡ್ಡಬೊಮ್ಮಸಂದ್ರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

9/11/2022
ನೋಡಲ್ ಅಧಿಕಾರಿ,
ವಾರ್ಡ್ ನಂ:13
ದೊಡ್ಡಬೊಮ್ಮಸಂದ್ರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by CamScanner